ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590-002

ZILLA PANCHAYAT OFFICE, BELGAUM-590002

ದೂರವಾಣಿ Telephone 0831-2407201, 0831-2407206, 0831-2407213

ಫ್ಯಾಕ್ಸ/Fax 0831-2429662

e-mail ceozpbelgaum@yahoo.com

ವಿಷಯ: ಸನ್-2013-14 ನೇ ಸಾಲಿನ 13ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ:1) ಸರ್ಕಾರದ ಆದೇಶ ಸಂ:ಗ್ರಾಅಪ:49:ಗ್ರಾಪಸ:2013 ದಿ: 3-4-2014.

2) ಜಿಲ್ಲಾ ಪಂಚಾಯತ ಸಾಮಾನ್ಯ ಸಭೆ ದಿನಾಂಕ: 12-06-2014.

## ಪ್ರಸ್ತಾವನೆ:

ಸನ್-2013-14 ನೇ ಸಾಲಿನ ಎರಡನೇ ಕಂತಿನ ಸಾಮಾನ್ಯ ಮೂಲ ಅನುದಾನವನ್ನು 13 ನೇ ಹಣಕಾಸು ಆಯೋಗದ ಶಿಫಾರಸ್ಸಿನನ್ವಯ ಓದಲಾದ(1)ರ ಸರ್ಕಾರದ ಆದೇಶದಲ್ಲಿ ಬಿಡುಗಡೆಯಾಗಿರುವ ಎರಡನೇ ಕಂತಿನ ಸಾಮಾನ್ಯ ಮೂಲ ಅನುದಾನ ರೂ. 18499,158/- ಲಕ್ಷ ಅನುದಾನದಲ್ಲಿ ಕ್ರಿಯಾ ಯೋಜನೆಯನ್ನು ಪರಿಶೀಲಿಸಿ ದಿನಾಂಕ: 12-06-2014 ರಂದು ಜರುಗಿದ ಜಿಲ್ಲಾ ಪಂಚಾಯತ ಸಾಮಾನ್ಯ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. ಈ ಅನುದಾನವನ್ನು ಲೆಕ್ಕ ಶಿರ್ಷಿಕೆ -2515-00-196-6-10, 2515-00-197-6-10 ಮತ್ತು 2515-00-198-6-10 (ಯೋಜನೇತರ) ಶಿರ್ಷಿಕೆಯಡಿ ಪಾವತಿಸಲು ಸರ್ಕಾರದ ಆದೇಶದಲ್ಲಿ ತಿಳಿಸಲಾಗಿದ್ದು, ಅದರಂತೆ ಸದರಿ ಯೋಜನೆಯಡಿಯಲ್ಲಿ ಬಿಡುಗಡೆಯಾಗಿರುವ ಅನುದಾನದ ಕ್ರಿಯಾ ಯೋಜನೆಯನ್ನು ಸರ್ಕಾರದ ಮಾರ್ಗಸೂಚಿಯನ್ವಯ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಕಲ್ಯಾಣಕ್ಕಾಗಿ ಶೇ.25ರಷ್ಟು ಹಾಗೂ ಶೇಕಡಾ. 3 ರಷ್ಟು ಅಂಗವಿಕಲರ ಕಲ್ಯಾಣಕ್ಕಾಗಿ ಕ್ರಿಯಾ ಯೋಜನೆಯಲ್ಲಿ ಕಲ್ಪಿಸಿಕೊಳ್ಳಲಾಗಿದೆ.

ಕಾರ್ಯಕಾರಿ ಅಭಿಯಂತರರು, ಪಂ.ರಾ.ಇಂ. ವಿಭಾಗ ಬೆಳಗಾವಿ / ಚಿಕ್ಕೋಡಿ ಇವರು 13 ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನದಡಿ ಸಲ್ಲಿಸಿರುವ ಕಾಮಗಾರಿವಾರು ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿದ್ದು, ಸದರಿ ಯೋಜನೆಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕಾರ್ಯಕಾರಿ ಅಭಿಯಂತರರು, ಪಂ.ರಾ.ಇಂ. ವಿಭಾಗ ಬೆಳಗಾವಿ ಇವರಿಗೆ 46 ಕಾಮಗಾರಿಗಳಿಗೆ ರೂ. 89,23,993/- ಲಕ್ಷ ಹಾಗೂ ಕಾರ್ಯಕಾರಿ ಅಭಿಯಂತರರು, ಪಂ.ರಾ.ಇಂ. ವಿಭಾಗ ಚಿಕ್ಕೋಡಿ ಇವರಿಗೆ 78 ಕಾಮಗಾರಿಗಳಿಗೆ ರೂ. 92,18,713/- ಲಕ್ಷ ಅನುದಾನ ಹಂಚಿಕೆಯಾದಂತೆ ಎರಡು ವಿಭಾಗ ಸೇರಿ ಒಟ್ಟು 18142706/- ಲಕ್ಷ ಅನುದಾನವನ್ನು ಈ ಕೆಳಗಿನಂತೆ ಎರಡು ವಿಭಾಗಗಳಿಗೆ ಹಂಚಿಕೆ ಮಾಡಿ ಮರು ಬಿಡುಗಡೆ ಮಾಡಲು ಈ ಆದೇಶ.

(ರೂ.ಲಕ್ಷಗಳಲ್ಲಿ)

| ಅ.ನಂ | ಅನುಷ್ಠಾನಾಧಿಕಾರಿಗಳು | ಈಗ ಬಿಡುಗಡೆ ಮಾಡಬೇಕಾದ ಎರಡನೇ ಕಂತಿನ ಅನುದಾನ | ಒಟ್ಟು ಕಾಮಗಾರಿಗಳು |
|---|---|---|---|
| 1 | 2 | 3 | 4 |
| 1 | ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ ಬೆಳಗಾವಿ | 89,23,993 | 46 |
| 2 | ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ ಚಿಕ್ಕೋಡಿ | 92,18,713 | 78 |
| | ಒಟ್ಟು | 181,42,706 | 124 |

ಕ್ರಸಂ:ಜಿಪ/ಅಭಿವೃದ್ಧಿ/13ನೇಹ/ವಿವ- /14-15

ದಿನಾಂಕ:0೨-07-2014

# ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಸನ್-2013-14 ನೇ ಸಾಲಿನ 13ನೇ ಹಣಕಾಸು ಆಯೋಗದ್ದ ಸಾಮಾನ್ಯ ಮೂಲ ಎರಡನೇ ಕಂತಿನ ಅನುದಾನಕ್ಕೆ ಜಿಲ್ಲಾ ಪಂಚಾಯತ ಸಾಮಾನ್ಯ ಸಭೆಯ ಅನುಮೋದಿತ ಕ್ರಿಯಾ ಯೋಜನೆಯಂತೆ ಬೆಳಗಾವಿಯ ಪಂ.ರಾ.ಇಂ. ವಿಭಾಗಕ್ಕೆ 46 ಕಾಮಗಾರಿಗಳಿಗೆ ರೂ. 89,23,993/- ಲಕ್ಷ ಹಾಗೂ ಚಿಕ್ಕೋಡಿ ಪಂ.ರಾ.ಇಂ. ವಿಭಾಗಕ್ಕೆ 78 ಕಾಮಗಾರಿಗಳಿಗೆ ರೂ. 92,18,713/- ಲಕ್ಷ ಹೀಗೆ ಎರಡು ವಿಭಾಗ ಸೇರಿ ಒಟ್ಟು ರೂ. 181,42,706/- ಲಕ್ಷ ಅನುದಾನದಲ್ಲಿ 124 ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು, ಅನುಷ್ಠಾನಾಧಿಕಾರಿಗಳಾದ ಕಾರ್ಯಕಾರಿ ಅಭಿಯಂತರರು, ಪಂ.ರಾ.ಇಂ.ವಿಭಾಗ ಬೆಳಗಾವಿ / ಚಿಕ್ಕೋಡಿ ಇವರಿಗೆ ಅಂಕಣ ಸಂ(3)ರಲ್ಲಿ ತೋರಿಸಿರುವ ಅನುದಾನವನ್ನು ಬಿಡುಗಡೆಗೊಳಿಸಲು ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ ಇವರಿಗೆ ಆದೇಶಿಸಿದೆ.

(ರೂ.ಲಕ್ಷಗಳಲ್ಲಿ)

| ಅ.ನಂ | ಅನುಷ್ಠಾನಾಧಿಕಾರಿಗಳು | ಈಗ ಬಿಡುಗಡೆ ಮಾಡಬೇಕಾದ ಎರಡನೇ ಕಂತಿನ ಅನುದಾನ | ಒಟ್ಟು ಕಾಮಗಾರಿಗಳು |
|---|---|---|---|
| 1 | 2 | 3 | 4 |
| 1 | ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ ಬೆಳಗಾವಿ | 89,23,993 | 46 |
| 2 | ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ ಚಿಕ್ಕೋಡಿ | 92,18,713 | 78 |
| | ಒಟ್ಟು | 181,42,706 | 124 |

ಮೇಲೆ ತೋರಿಸಿದ ಮೊತ್ತವನ್ನು ಅನುಷ್ಠಾನ ಅಧಿಕಾರಿಗಳು ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಅನುಷ್ಠಾನಗೊಳಿಸಲು ಆದೇಶಿಸಿದೆ.

**ನಿಬಂಧನೆಗಳು:**

1) ಸರ್ಕಾರದ ಆದೇಶ ಸಂ: ಗ್ರಾಅಪ:21:ಗ್ರಾಪಸ:2013 ದಿ:27-06-2013 ರಲ್ಲಿ ಸೂಚಿಸಿರುವ ಮಾರ್ಗಸೂಚಿಗಳ ಪ್ರಕಾರ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.
2) ಈ ಅನುದಾನವನ್ನು ಕ್ರಿಯಾ ಯೋಜನೆಯಲ್ಲಿ ಅನುಮೋದನೆಯಾದ 13ನೇ ಹಣಕಾಸು ಆಯೋಗದ ಕಾಮಗಾರಿ ಹೊರತು ಬೇರೆ ಯಾವುದೇ ಕಾಮಗಾರಿಗಳಿಗೆ ಉಪಯೋಗಿಸತಕ್ಕದ್ದಲ್ಲ.
3) ಬಳಕೆಯಾದ ಹಣ ಹಾಗೂ ಕಾಮಗಾರಿ ಪ್ರಗತಿಯನ್ನು ವೆಬ್‌ಸೈಟನಲ್ಲಿ ಹಾಗೂ ಆನ್‌ಲೈನ್ ಸೌಲಭ್ಯದಲ್ಲಿ ಅಳವಡಿಸಲಾಗಿರುವ ನಮೂನೆಯಲ್ಲಿ ಪ್ರತಿ ತಿಂಗಳು 3ನೇ ತಾರೀಖಿನೊಳಗೆ ಪ್ರಗತಿ ನೀಡತಕ್ಕದ್ದು.
4) 13ನೇ ಹಣಕಾಸು ಆಯೋಗದ ವಿವಿಧ ಯೋಜನೆಗಳ ಕಾಮಗಾರಿಗಳನ್ನು ಜಿಲ್ಲಾ ಪಂಚಾಯತಿಯಿಂದ ಆಡಳಿತಾತ್ಮಕ ಅನುಮೋದನೆ ಪಡೆಯತಕ್ಕದ್ದು.
5) 13ನೇ ಹಣಕಾಸು ಆಯೋಗದ ಸಾಮಾನ್ಯ ನಿರ್ವಹಣೆ ಹಾಗೂ ಸಾಮಾನ್ಯ ಮೂಲ ಅನುದಾನದಡಿ ಕಾಮಗಾರಿಗಳಿಗಾಗಿ ಬಿಡುಗಡೆಯಾದ ಅನುದಾನಕ್ಕೆ ಪ್ರತಿ ತ್ರೈಮಾಸಿಕ ಅವಧಿಗೆ ಅಂತ್ಯಗೊಂಡಂತೆ ಆರ್ಥಿಕ ಮತ್ತು ಭೌತಿಕ ಪ್ರಗತಿಯೊಂದಿಗೆ ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
6) ಕಾಮಗಾರಿ ಅನುಷ್ಠಾನದಲ್ಲಿ ಸರ್ಕಾರದ ಮಾರ್ಗಸೂಚಿಯನ್ವಯ ಕಾಮಗಾರಿಗಳನ್ನು ಕೈಗೊಳ್ಳತಕ್ಕದ್ದು. ಹಾಗೂ ಸರ್ಕಾರದಿಂದ, ಮತ್ತು ಜಿಲ್ಲಾ ಪಂಚಾಯತಿಯಿಂದ ಕಾಲಕಾಲಕ್ಕೆ ನೀಡಲಾದ, ಮಾರ್ಗಸೂಚಿ, ಸುತ್ತೋಲೆ, ಹಾಗೂ ಆದೇಶಗಳನ್ನು ಪಾಲಿಸತಕ್ಕದ್ದು.
7) ಕಾಮಗಾರಿ ಅನುಷ್ಠಾನದಲ್ಲಿ 3 ಹಂತದ ಛಾಯಾ ಚಿತ್ರಗಳನ್ನು ತೆಗೆದು ಕಡತದಲ್ಲಿ ನಿರ್ವಹಿಸತಕ್ಕದ್ದು. ಹಾಗೂ ಮೇಲಾಧಿಕಾರಿಗಳ ಭೇಟಿ ಸಮಯದಲ್ಲಿ ಅವರ ಗಮನಕ್ಕೆ ತರತಕ್ಕದ್ದು.

8) ಬಿಡುಗಡೆಯಾದ ಹಾಗೂ ಲಭ್ಯವಿದ್ದ ಅನುದಾನಕ್ಕೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳತಕ್ಕದ್ದು.

9) ಸಾರ್ವಜನಿಕ ಪಾರದರ್ಶಕ ನಿಯಮಗಳನ್ನು ಪಾಲಿಸತಕ್ಕದ್ದು.

10) ಕಾಮಗಾರಿಗಳು ಮುಕ್ತಾಯವಾದ ನಂತರ ಸಂಬಂಧಿಸಿದ ಗ್ರಾಮ ಪಂಚಾಯತಿಯಿಂದ ಮುಕ್ತಾಯವಾದ ಬಗ್ಗೆ ಧೃಡೀಕರಣ ಪತ್ರವನ್ನು ಈ ಕಾರ್ಯಾಲಯಕ್ಕೆ ಸಲ್ಲಿಸತಕ್ಕದ್ದು.

(ದೀಪ ಚೋಳನ್)
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ.

<u>ಪ್ರತಿಯನ್ನು: ಗೌರವಗಳೊಂದಿಗೆ ಸಲ್ಲಿಸಿದೆ.</u>

1) ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ, ಬೆಂಗಳೂರು.
2) ಅಧ್ಯಕ್ಷರು, ಜಿಲ್ಲಾ ಪಂಚಾಯತ ಬೆಳಗಾವಿ.
3) ಉಪಾಧ್ಯಕ್ಷರು, ಜಿಲ್ಲಾ ಪಂಚಾಯತ ಬೆಳಗಾವಿ.

<u>ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:</u>

1) ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ.
2) ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ
3) ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ ಬೆಳಗಾವಿ/ಚಿಕ್ಕೋಡಿ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ.